aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Kannada (Paper 2)

EXAM	YEAR	TYPE	SUBJECT
Karnataka Class 12	2027	Sample Paper	Kannada

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

2026-27 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 2

ವಿಷಯ: ಕನ್ನಡ (01) **ಗರಿಷ್ಠ ಅಂಕಗಳು: 80**

ಸಮಯ: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 52**

ಸೂಚನೆ: ೧. "ಅ-ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. (10x1=10)

1. ಸಮಧಿಕರಾರ್ ಜಗತ್ತ್ರಯದೊಳಿನ್ನೆನಗೆನ್ನೊಳದಿರ್ಚುವನ್ನರಾರ್

   ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ. . .ಈ ಪದ್ಯಭಾಗದಲ್ಲಿ ವ್ಯಕ್ತವಾಗಿರುವ ಭಾವ.

   ಅ) ರಾವಣನ ಆಕ್ರೋಶ ಆ) ರಾವಣನ ಉತ್ಸಾಹ

   ಇ) ರಾವಣನ ನೋವು ಈ) ರಾವಣನ ಹತಾಶೆ

2. ಇದರಿಂದ ಪರಿಮಳವನ್ನು ಅರಿಯಬಹುದು.

   ಅ) ಪುಷ್ಪದಿಂದ ಆ) ಫಲದಿಂದ

   ಇ) ಕಾಯಿಯಿಂದ ಈ) ಚಿಗುರಿನಿಂದ

3. ಹಗೆಯನ್ನು ಏನೆಂದು ಉಪೇಕ್ಷಿಸಬಾರದು?

   ಅ) ದಡ್ಡನೆಂದು ಆ) ಕುರುಡನೆಂದು

   ಇ) ಮುದುಕನೆಂದು ಈ) ಬಾಲಕನೆಂದು

4. ದುರ್ಜನರ ಎಂತಹ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ?

   ಅ) ಒಳ್ಳೆಯ ಮಾತಿಗೆ ಆ) ಕನಿಕರದ ಮಾತಿಗೆ

   ಇ) ಬಿನ್ನಾಣದ ಮಾತಿಗೆ ಈ) ಕೆಟ್ಟ ಮಾತಿಗೆ

5. ಜನರಿಗೆ ಇದಕ್ಕೆ ಗತಿಯಿಲ್ಲ.

   ಅ) ನೀರಿಗೆ ಆ) ಹಣಕ್ಕೆ

   ಇ) ಗಂಜಿಗೆ ಈ) ಮನೆಗೆ

6. ಬಸಲಿಂಗನ ಕಾಯಿಲೆ ದೇಹದ ಮಟ್ಟದಿಂದ ಈ ಸ್ತರವನ್ನು ತಲುಪತೊಡಗಿತ್ತು

   ಅ) ಬೌದ್ಧಿಕ ಸ್ತರ ಆ) ಮಾನಸಿಕ ಸ್ತರ

   ಇ) ಭಾವನಾತ್ಮಕ ಸ್ತರ ಈ) ಶಾರೀರಿಕ ಸ್ತರ

7. “ಎಲವೋ ಹುಲುಮಾನವ ವೆಂಕಪ್ಪಯ್ಯ, ಸುತ್ತಲ ನಾಕೂರಲ್ಲಿರುವ ಯಾವನೇ ಶ್ಯಾನುಭೋಗ ಉಗ್ಯಾಣಿಯನ್ನಾದರೂ ಕರೆತಂದು ನನ್ನೆದುರು ಸರಪಳಿ ಎಳೆಸು” ಈ ಸಾಲುಗಳು ಕೆಳಗಿನ ಯಾವ ಭಾವವನ್ನು ವ್ಯಕ್ತಪಡಿಸುತ್ತವೆ.

ಅ) ವೆಂಕಪ್ಪಯ್ಯನವರ ನಿಸ್ವಾರ್ಥ ಆ) ಹೊಳೆಗೆ ವೆಂಕಪ್ಪಯ್ಯನವರ ಮೇಲಿನ ಪ್ರೀತಿ

ಇ) ಪ್ರಕೃತಿ ಮೇಲಿನ ಮಾನವನ ಪ್ರೀತಿ ಈ) ಪ್ರಕೃತಿಯ ಮೇಲಿನ ಮನುಷ್ಯನ ದಬ್ಬಾಳಿಕೆ

8. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?

ಅ) ಟೆಲಿಫೋನ್ ಡಿಪಾರ್ಟ್‌ಮೆಂಟ್ ಆ) ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟ್

ಇ) ಅಂಚೆ ಡಿಪಾರ್ಟ್‌ಮೆಂಟ್ ಈ) ಫಾರೆಸ್ಟ್ ಡಿಪಾರ್ಟ್‌ಮೆಂಟ್

9. ನಿರೂಪಕರ ಪ್ರಕಾರ ಇದು ಮುನಿಸಿಪಾಲಿಟಿ ಪ್ರಸಿಡೆಂಟರ ಕರ್ತವ್ಯ.

ಅ) ಊರನ್ನು ಸ್ವಚ್ಛವಾಗಿಡೋದು. ಆ) ಕಚೇರಿಯನ್ನು ಸ್ವಚ್ಛವಾಗಿಡೋದು.

ಇ) ರಸ್ತೆಯನ್ನು ಸ್ವಚ್ಛವಾಗಿಡೋದು. ಈ) ತಮ್ಮ ಮನೆ ಸುತ್ತಮುತ್ತ ಸ್ವಚ್ಛತೆ ಮಾಡಿಸೋದು.

10. "ಆನೆ ಅಷ್ಟು ದೊಡ್ಡ ಪ್ರಾಣಿಯಾದರೂ ಸುಳಿವೇ ಕೊಡದೆ ತಂಗಾಳಿಯಂತೆ ಓಡಾಡಬಲ್ಲದು ಎನ್ನುವುದು ನಾಗರಾಜನ ಸರ್ವಿಸ್ಸಿನಲ್ಲಿ ಎಷ್ಟೋ ಸಾರಿ ಗಮನಕ್ಕೆ ಬಂದಿತ್ತು. ಅದಕ್ಕೇ ಅವನು ಮೈಯ್ಯೆಲ್ಲ ಕಣ್ಣಾಗಿ ಕುಳಿತಿದ್ದ". ಇಲ್ಲಿ ಆನೆ ಕುರಿತು ಹೇಳಿರುವ ಸಂಗತಿ.

ಅ) ಆನೆ ದೊಡ್ಡ ಪ್ರಾಣಿ, ಅದು ಅಸೂಕ್ಷ್ಮವಾಗಿರುತ್ತದೆ.

ಆ) ಆನೆ ದೊಡ್ಡ ಪ್ರಾಣಿ, ಅದು ಗದ್ದಲ ಮಾಡಿಕೊಂಡೇ ಓಡಾಡುತ್ತದೆ.

ಇ) ಆನೆ ದೊಡ್ಡ ಪ್ರಾಣಿ, ಅದು ಸೂಕ್ಷ್ಮವಾಗಿ ವರ್ತಿಸುತ್ತದೆ.

ಈ) ಆನೆ ದೊಡ್ಡ ಪ್ರಾಣಿ, ಅದು ಸೂಕ್ಷ್ಮವಾಗಿ ವರ್ತಿಸುವುದಿಲ್ಲ.

(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5x1=5)**

(ಪ್ರಶ್ನೆ ಕೇಳುವುದು, ಮನೋರಮೆ, ಚಹಾ, ಸೀತಾ, ಭಾಷೆ, ಪ್ಲೇವಿಯಾ,)

11. ..... ಮುಂಬಯಿಯ ಪ್ರಸಿದ್ಧ ನ್ಯಾಯವಾದಿಯಾದರು.

12. ಬದುಕು ..... ಅನ್ನು ಬಿಟ್ಟು ಇರುವುದಿಲ್ಲ.

13. ವಿಜ್ಞಾನದ ಅಡಿಪಾಯವೇ .....

14. ಕನ್ನಡವು ಕಸ್ತೂರಿಯಲ್ಲವೆ! ಎಂದವರು .....

15. ಕಲಿಯುಗದ ಅಮೃತ .....

(ಇ) 16. ಹೊಂದಿಸಿ ಬರೆಯಿರಿ. **(5x1=5)**

(ಅ) ಪುಲಿಗೆರೆ ಸೋಮನಾಥ	೧) ಚಿಟ್ಟೆ ಮತ್ತು ಜೀವಯಾನ
(ಆ) ಪುರಂದರದಾಸರು	೨) ಶಿಲುಬೆ ಏರಿದ್ದಾನೆ
(ಇ) ಬೆಳಗು ಜಾವ	೩) ಗದುಗಿನ ಭಾರತ
(ಈ) ಹತ್ತಿ.....ಚಿತ್ತ....ಮತ್ತು....	೪) ಶತಕ
(ಊ) ಕೆ. ಎಸ್ ನಿಸಾರ್ ಅಹಮದ್	೫) ಮುಕ್ತಕಂಠ
	೬) ಜಾಲಿಯ ಮರದಂತೆ

ಆ-ವಿಭಾಗ

(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

17. ರಾವಣನು ಅಂತಿಮವಾಗಿ ಯಾವ ತೀರ್ಮಾನಕ್ಕೆ ಬರುತ್ತಾನೆ?

18. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?

19. ಬೆಳಕು – ಬೇಟೆಗಾರ ಬರುವ ಬಗೆ ಹೇಗೆ?

20. ಜೀಸಸ್ ಎಲ್ಲೆಲ್ಲಿ ಶಿಲುಬೆಯೇರಿದ್ದಾನೆ?

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(2x2=4)**

21. ಸೂತಕವನ್ನು ಪರಿಹರಿಸಲು ಸಿದ್ಲಿಂಗಿ ಏನು ಮಾಡಿದಳು?

22. ತ್ರಿಭಾಷಾ ಸೂತ್ರದ ಬಳಕೆ ಹೇಗಿರಬೇಕು?

23. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?

24. ಪಟ್ಟಣದ ಹೊಟೇಲಿನ ಕಟ್ಟಡ ಹೇಗಿದೆ?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

25. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

26. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

27. ತನ್ನ ಕೆಲಸ ಅತ್ಯಂತ ಅಪಾಯಕಾರಿಯೆಂದು ದುರ್ಗಪ್ಪ ಹೇಗೆ ಹೇಳಿದ?

28. 'ನಾಯಿ ಕಚ್ಚಿದ್ದೆಲ್ಲಿ' ಎಂದಾಗ ಜಬ್ಬಾರ್ ಇರುಸುಮುರುಸಿನಿಂದ ಏನು ಹೇಳಿದನು?

ಇ-ವಿಭಾಗ

(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2x3=6)**

29. ಎನ್ನವೊಲು ಮುನ್ನಾರು ನವೆದವರುಂಟು.

30. ಜ್ಯೋತಿ ನಿನ್ನ್ಯಾರ ಹೋಲರ.

31. ಮಾತೇ ಮರೆತು ಹೋಗಿದೆ ಕಣೆ.

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)

32. ಅವರು ನನ್ನಷ್ಟೇ ಒಳ್ಳೆಯ ಡಾಕ್ಟರು, ಏನೂ ತಪ್ಪು ತಿಳಿಯಬೇಡ.

33. "ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ."

34. ಸೀತಾಪಹರಣ ಕಥನದೊಳ್ ಬಯಕೆಯೆ?

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)

35. ನಿನ್ನ ಪುಕಾರೇನಿದ್ರೂ ಬರವಣಿಗೇಲಿ ಇರಬೇಕು.

36. ಕಂಬದ ಮೇಲೆ ಯಾಕೋ ಕೈಲಾಸ ಕಂಡಹಾಗೆ ಇದೆಯಲ್ಲ.

ಈ-ವಿಭಾಗ

(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2x4=8)

37. ಶಿವಪಥವನ್ನು ಅರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣನವರು ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

38. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.

39. ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃಪ್ರಾಣಂ
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್ ||

ಅ) ದಶಕಂಧರ ಎಂದರೆ ಯಾರು? **(1 ಅಂಕ)**

ಆ) ಸೀತೆಯು ರಾವಣನನ್ನು ಏನೆಂದು ಬೇಡಿಕೊಂಡಳು? **(1 ಅಂಕ)**

ಇ) ಸೀತೆ ಏಕೆ ಮೂರ್ಛೆ ಹೋದಳು? **(2 ಅಂಕ)**

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

41. ವಾಲ್‌ಪರೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದ? ವಿವರಿಸಿ.?

42. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

43. ಆನೆ ರಹಮಾನ್‌ನ ಅಂಗಡಿ ಬೀಳಿಸಿದ ಸಂದರ್ಭವನ್ನು ವಿವರಿಸಿ.

44. ನಾಗರಾಜನ ನಿಗೂಢ ಕಣ್ಮರೆ ಬಗ್ಗೆ ಜನರ ಊಹಾಪೋಹದ ಅಭಿಪ್ರಾಯಗಳೇನು? ಸಂಗ್ರಹಿಸಿ ಬರೆಯಿರಿ.

ಊ-ವಿಭಾಗ

(ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (4x2=8)

45. ಕೆಳಗಿನ ಎರಡು ಪದಗಳಿಗೆ **ಸಮಾನಾರ್ಥಕಗಳನ್ನು** ಬರೆಯಿರಿ.

ಸುತ, ಬಂಗಾರ, ನಂಜು

46. ಕೆಳಗಿನ ಎರಡು ಪದಗಳ **ಗುಣವಾಚಕಗಳನ್ನು** ಬರೆಯಿರಿ.

ದುರ್ಗಂಧ, ಕ್ರೂರಕರ್ಮ, ಗಟ್ಟಿಪಾದ

47. ಕೆಳಗಿನ ಎರಡು ಕ್ರಿಯಾಪದಗಳ **ಧಾತುರೂಪಗಳನ್ನು** ಬರೆಯಿರಿ.

ತೂಗಿದನು, ಕೊಟ್ಟರು, ಓದುವಳು

48. ಕೆಳಗಿನ ಎರಡು **ದ್ವಿರುಕ್ತಿ ಪದ**ಗಳನ್ನು ನಿಮ್ಮ **ಸ್ವಂತವಾಕ್ಯ**ದಲ್ಲಿ ಬಳಸಿ ಬರೆಯಿರಿ.

ಹಚ್ಚ ಹಸುರು, ಬೇಡ ಬೇಡ, ಮೆಲ್ಲಮೆಲ್ಲನೆ

49. ಕೆಳಗಿನ ಎರಡು ಪದಗಳ **ವಿಭಕ್ತಿಗಳನ್ನು** ಹೆಸರಿಸಿ.

ಬಸಲಿಂಗನಿಗೆ, ಗದ್ಯದೊಳ್, ಮಂತ್ರಿಯು

50. ಕೆಳಗಿನ ಎರಡು ಪದಗಳ **'ತತ್ಸಮ' ರೂಪ** ಬರೆಯಿರಿ.

ಜಸ, ಪರಿಕಿಸು, ಸಕ್ಕದ

(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (1x4=4)

51. ಸಾಮಾಜಿಕ ಜಾಲತಾಣಗಳು ಅವುಗಳ ಪರಿಣಾಮಗಳು.

ಅಥವಾ

ಯೋಗಾಭ್ಯಾಸದ ಪ್ರಯೋಜನಗಳು

(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ. (1x4=4)

52. ಅಭಿಷೇಕ್/ಮೇರಿ, ಗುರುನಾನಕ್ ಪದವಿ ಪೂರ್ವ ಕಾಲೇಜು, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಇದನ್ನು ನಿಮ್ಮ ವಿಳಾಸ ಎಂದು ಭಾವಿಸಿ ನಿಮ್ಮ ಗೆಳೆಯ/ಗೆಳತಿಯಾದ ಮಹಮದ್/ಲಾವಣ್ಯ, ವಿವೇಕಾನಂದ ಪದವಿ ಪೂರ್ವ ಕಾಲೇಜು, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ, ಇವರಿಗೆ ನಿಮ್ಮ **ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವವನ್ನು** ಕುರಿತು ಪತ್ರ ಬರೆಯಿರಿ.

ಅಥವಾ

ಸಂತೋಷ/ಗೌರಮ್ಮ, ಬಂಕಾಪುರ ಗ್ರಾಮ, ಶಿಗ್ಗಾಂವಿ ತಾಲ್ಲೂಕು, ಹಾವೇರಿ ಜಿಲ್ಲೆ, ಈ ವಿಳಾಸದಲ್ಲಿ ನೀವು ವಾಸವಿದ್ದೀರಿ ಎಂದು ತಿಳಿದು ನಿಮ್ಮ ಊರಿಗೆ ಒಂದು **ಸುಸಜ್ಜಿತವಾದ ಗ್ರಂಥಾಲಯವನ್ನು ನಿರ್ಮಿಸಿ ಕೊಡುವಂತೆ** ಕೋರಿ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ದೇವಗಿರಿ, ಹಾವೇರಿ ಜಿಲ್ಲೆ, ಇವರಿಗೆ ಒಂದು ಪತ್ರ ಬರೆಯಿರಿ.

* * * * * * * *

aglasem.com For more Question Papers, Sample Papers, Notes & Syllabus visit aglasem.com